## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 533(592)
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11.12.2025
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | KSISF (ISD)ನಡಿ ಕಾರ್ಯ ನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕದ ಸಿಬ್ಬಂದಿಗಳು ತಮಗಾದ ಅನ್ಯಾಯವನ್ನು ಕೆ.ಎ.ಟಿ ಬೆಂಗಳೂರು ಪೀಠದಲ್ಲಿ ದಾವೆ ಹಾಕಿದ್ದು, ಅರ್ಜಿ ಸಂಖ್ಯೆ:3432ರಿಂದ 3488/2024 ಆದೇಶದಲ್ಲಿ ಪೂರ್ವಾನ್ವಯವಾಗಿ ಈ ಹುದ್ದೆಗಳನ್ನು ಹಂಚಿಕೆ ಮಾಡಿ ಮುಂಬಡ್ತಿ ಮಾಡಲು ಆದೇಶಿಸಿದ್ದು ಪ್ರಸ್ತುತದವರೆಗೆ ಪೂರ್ವಾನ್ವಯವಾಗಿ ಈ ಹುದ್ದೆಗಳ ಹಂಚಿಕೆ ಮಾಡದಿರಲು ಕಾರಣಗಳೇನು; | ಕೆ.ಎಸ್.ಐ.ಎಸ್.ಎಫ್.ನ ಸಿಬ್ಬಂದಿಗಳಾದ ಶ್ರೀ ಭೀಮಾ ಮತ್ತು ಇತರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು. ಇಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ: 3432-3488/2024ರಲ್ಲಿ ಮಾನ್ಯ ನ್ಯಾಯಮಂಡಳಿಯು ದಿನಾಂಕ 31.08.2024ರಂದು ತೀರ್ಪು ನೀಡಿ ಅರ್ಜಿದಾರರ ದಿನಾಂಕ 27.05.2024ರ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ 2ನೇ ಪ್ರತಿವಾದಿಯಾದ ಸಿಆಸು ಇಲಾಖೆಯೊಂದಿಗೆ ಸಮಾಲೋಚಿಸಿ 4 ವಾರಗಳೊಳಗೆ ಕ್ರಮವಹಿಸುವಂತೆ ಆದೇಶಿಸಿರುತ್ತದೆ. ಸದರಿ ತೀರ್ಪಿನಲ್ಲಿ ಪೂರ್ವಾನ್ವಯವಾಗಿ ಹುದ್ದೆಗಳನ್ನು ಹಂಚಿಕೆ ಮಾಡುವ ಬಗ್ಗೆ ಆದೇಶಿಸಿರುವುದಿಲ್ಲ. |
| ಆ) | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013ರ ನಿಯಮಗಳು ವಿಶೇಷ ನಿಯಮಗಳಾಗಿದ್ದು ಈ ನಿಯಮಗಳಂತೆ ಕಲ್ಯಾಣ ಕರ್ನಾಟಕದ ಸಿಬ್ಬಂದಿಗಳಿಗೆ ಮುಂಬಡ್ತಿ ಹುದ್ದೆಗಳು ಹಂಚಿಕೆ ಆಗಿಲ್ಲ ಹಾಗೂ ಇದಕ್ಕೆ RPP ACT ಅನ್ವಯ ಆಗುವುದಿಲ್ಲ ಆದುದರಿಂದ 371(J) ಪರಿಕಲ್ಪನೆ ಪೂರ್ವದಲ್ಲಿ ಜಾರಿ ಇರುವ ಈ KSCS RPP ACT ಅನ್ವಯಿಸಲು ಹೇಗೆ ಸಾಧ್ಯ: (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡಿ) | ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡುವ ಕುರಿತಂತೆ THE KARNATAKA STATE CIVIL SERVICES (REGULATION OF PROMOTION, PAY AND PENSION) ACT, 1973ರ ಸೆಕ್ಷನ್ 3ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆ. THE KARNATAKA STATE CIVIL SERVICES (REGULATION OF PROMOTION, PAY AND PENSION) RULES, 1978ರ ನಿಯಮ 2ರಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡುವ ಪ್ರಕರಣಗಳನ್ನು ವಿವರಿಸಲಾಗಿರುತ್ತದೆ. ಈ ಸಂದರ್ಭಗಳನ್ನು ಹೊರತುಪಡಿಸಿ ಇತರ ಸಂದರ್ಭಗಳಲ್ಲಿ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಮೇಲಿನ ಅಧಿನಿಯಮ ಮತ್ತು ಅದರಡಿ ಹೊರಡಿಸಲಾಗಿರುವ ನಿಯಮಗಳು ಅನುಚ್ಛೇಧ 371(ಜೆ)ರಡಿ ರಚಿಸಲಾಗಿರುವ ಸ್ಥಳೀಯ ವೃಂದದ ಹುದ್ದೆಗಳಿಗೂ ಅನ್ವಯವಾಗುತ್ತವೆ. ಅದರನ್ವಯ ಪರಿಶೀಲಿಸಿ ಕೆ.ಎಸ್.ಐ.ಎಸ್.ಎಫ್. ನಲ್ಲಿ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ಅವಕಾಶವಿರುವುದಿಲ್ಲವೆಂದು ಒಳಾಡಳಿತ ಇಲಾಖೆಗೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. |
| ಇ) | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013ಕ್ಕೆ KSCS RPP ACT 1973 ಅನ್ವಯಿಸುತ್ತದೆ ಎಂಬುದಾದರೇ KSCS RPP ACT 1973ರ ಸೆಕ್ಷನ್ 4ರ ಅನ್ವಯ ಬಡ್ತಿಗಳು ಇತ್ಯಾದಿ ಹಂಚಿಕೆದಾರರು ಸದರಿ ನಿಯಮದಲ್ಲಿ ವಿವರವಾಗಿ ಆಡಳಿತ ಕಛೇರಿಯಿಂದ ಆದ ತಪ್ಪುಗಳನ್ನು ಸರಿಮಾಡಲು ಅವಕಾಶಗಳು ಇದ್ದಾಗ ಅದರಂತೆ ಸರಿಪಡಿಸಲು ನಿರ್ದೇಶನ ನೀಡದೆ ಇರಲು/ಕ್ರಮ ಕೈಗೊಳ್ಳದೆ ಇರಲು ಕಾರಣಗಳೇನು; | |
| ಈ) | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013ರ ನಿಯಮಗಳಂತೆ ಹಾಗೂ KAT ಬೆಂಗಳೂರು ನ್ಯಾಯಾಲಯ ಆದೇಶದಂತೆ KSISFನಲ್ಲಿ HC ಹುದ್ದೆಗಳ ಪೂರ್ವಾನ್ವಯವಾಗಿ ಹಂಚಿಕೆ ಮಾಡಲು ಕಾನೂನು ಅಡಿ ಅವಕಾಶಗಳು ಇದ್ದಾಗ, KSCS RPP ACT 1973ರ ಸೆಕ್ಷನ್ 3ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆ, ಎಂದು ಆಕ್ಷೇಪಾರ್ಹ ನಿರ್ದೇಶನ ಮಾಡಲು ಕಾರಣಗಳೇನು; ಇದನ್ನು ತಿದ್ದುಪಡಿ ಮಾಡುವ ಕ್ರಮಗಳು ಮೇಲ್ಮನವಿ ಪ್ರಾಧಿಕಾರದ ಮುಂದೆ ಇದೆಯೇ? | |

**ಸಂಖ್ಯೆ:ಸಿಆಸುಇ 132 ಹೈಕಕೋ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ